MANGALORE MARKET REPORTS
MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 ENGLISH DAILY Subscription Yearly - Rs. - MONDAY 20-12-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಕೆಲವು ಕೃಷಿ ಉತ್ಪಾದನೆಗಳಿಗೆ ವಾಯಿದೆ ವ್ಯವಹಾರ ನಿಷೇಧ

7 ವಿಧದ ಕೃಷಿ ಉತ್ಪಾದನೆಗಳನ್ನು ವಾಯಿದೆ ವ್ಯವಹಾರ ಮೂಲಕ ಮಾರಾಟಕ್ಕೆ JEBI ಒಂದು ವರ್ಷದ ನಿಷೇಧ ಹೇರಿದೆಯೆನ್ನಲಾಗಿದೆ. ಕೆಲವು ವಸ್ತುಗಳ ಬೆಲೆಯೇರಿಕೆ ನಿಯಂತ್ರಣಕ್ಕಾಗಿ ನಿಷೇಧ ವಿಧಿಸಲಾಗಿದೆಯೆನ್ನಲಾಗಿದೆ. ಬಾಸ್ಮತಿಯೇತರ ಅಕ್ಕಿ, ಭತ್ತ, ಗೋಧಿ, ಸಾಸಿವೆ–ಸಾಸಿವೆ ಉತ್ಪಾದನೆಗಳು, ಸೋಯಬೀನ್ ಮತ್ತು ಅದರ ಉತ್ಪಾದನೆಗಳು, ಕ್ರೂಡ್ ಪಾಮೆಣ್ಣೆ ಹಾಗೂ ಹೆಸರುಕಾಳು ಇವುಗಳಿಗೆ ವಾಯಿದೆ ವ್ಯವಹಾರ ಒಂದು ವರ್ಷದವರೆಗೆ ನಿಷೇಧ ವಿಧಿಸಿದ್ದು ತಕ್ಷಣ ಜಾರಿಯಾಗಲಿದೆಯನ್ನಲಾಗಿದೆ.

## ನವೆಂಬರ್ ತಿಂಗಳಲ್ಲಿ ದೇಶದ ಎಣ್ಣೆ ಹಿಂಡಿ ರಫ್ತು 51 ಶೇಕಡಾ ಇಳಿಕೆ

ನವೆಂಬರ್ ತಿಂಗಳಲ್ಲಿ ಭಾರತದಿಂದ ಎಣ್ಣೆ ಹಿಂಡಿಗಳ ರಫ್ತು 51 ಶೇಕಡಾ ಇಳಿಕೆಯಾಗಿ 1.62 ಲಕ್ಷ ಟನ್ ಗಳಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ನವೆಂಬರ್ ನಲ್ಲಿ ಇದು 3.32 ಲಕ್ಷ ಟನ್ ಗಳಾಗಿತ್ತೆನ್ನಲಾಗಿದೆ. ಸೋಯ ಮೀಲ್ ರಫ್ತು ಹಿಂದಿನ ವರ್ಷ ನವೆಂಬರ್ ನಲ್ಲಾಗಿದ್ದ 198776 ಟನ್ ಗಳಿಂದ 42,383 ಟನ್ ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ಸೋಯಬೀನ್ ದರ ಹೆಚ್ಚಳದಿಂದ ಎಣ್ಣೆ ಹಿಂಡುವಿಕೆ ಇಳಿಕೆಯಾಗಿದ್ದು, ಸೋಯಮೀಲ್ ಅಧಿಕ ದರದಿಂದಾಗಿ ವ್ಯವಹಾರ ಇಳಿಕೆಯಾಗಿದೆಯೆನ್ನಲಾಗಿದೆ.